**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರವರ ಕಛೇರಿ, ಬೆಂಗಳೂರು-೧**

ಸಂಖ್ಯೆ: ೫೮(೭) ಶಾ.ಶಿ.ಅ. ಹೊ.ಪ್ರಾ.ಶಾ.೧೮/೨೦೦೦-೨೦೦೧ ದಿನಾಂಕ:೧೬-೦೨-೨

ಕರ್ನಾಟಕ ಸರ್ಕಾರ

ನಮೂನೆ

(ನಿಯಮ ೩ ಉಪನಿಯಮ ೫(ಬಿ)

ಪ್ರಮಾಣ ಪತ್ರ ಸಂಖ್ಯೆ ೩೮೨/೨೦೦೦-೦೧

ಜೈಂಟ್ಸ್ ಶಿಕ್ಷಣ ಸಂಸ್ಥೆ, ಗೋಕುಲ ರೋಡ್, ಹುಬ್ಬಳ್ಳಿ, ಧಾರವಾಡ ಜಿಲ್ಲೆ ಗವರ್ನಿಂಗ ಕರ್ನಾಟಕ ಶಿಕ್ಷಣ ಕಾಯ್ದೆ ೧೯೮೩ (ಕರ್ನಾಟಕ ಅಕ್ಟ್ ೧-೧೯೯೫) ಸೆಕ್ಷನ್ ೩೧ ರಂತೆ ಈ ದಿನ ೧೬ನೇ ಫೆ ಸಾವಿರದ ಒಂದನೇ ಇಸವಿಯಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೋಂದಾಯಿಸಲ ಪ್ರಮಾಣೀಕರಿಸಲಾಗಿದೆ

೧. ಕ್ರಮ ಸಂಖ್ಯೆ - ೩೮೨

೨. ಶಿಕ್ಷಣ ಸಂಸ್ಥೆಯ ವಿವರ - ಜೈಂಟ್ಸ್ ಆಂಗ್ಲ ಪ್ರೌಢ ಶಾಲೆ ಗೋಕುಲ ರೋಡ್,ಹುಬ್ಬಳ್ಳಿ

೩. ಅನುಮತಿ ನೀಡಿದ ತರಗತಿ - ೮ನೇ ತರಗತಿ

೪. ಪ್ರಾರಂಭಿಸ ಬೇಕಾದ ತರಗತಿಗಳು ಹಾಗೂ ಶೈಕ್ಷಣಿಕ ವರ್ಷ - ೮ನೇ ತರಗತಿ ೯ನೇ ತರಗತಿ ೧೦ನೇ ತರಗತಿ
೨೦೦೦-೦೧ ೨೦೦೧-೦೨ ೨೦೦೨-೦೩

೫. ಅನುಮತಿ ನೀಡಿದ ಮಾಧ್ಯಮ - ಆಂಗ್ಲ ಮಾಧ್ಯಮ

೬. ಶುಲ್ಕ ಪಾವತಿ ಮಾಡಿರುವುದು - ರೂ. ೧೦,೦೦೦-೦೦ ಪಾವತಿ ಮಾಡಿರುತ್ತಾರೆ.

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ:೩೮೨ ಪುಟ ಸಂಖ್ಯೆ:೩೮೨ ವ್ಯಾಲ್ಯೂಂ ಸಂಖ್ಯೆ: ೦. ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ.

ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ:

೧. ಈ ನೋಂದಾವಣೆಯ ನಿಯಮ ೩(೫)(೪) ಕ್ಕೆ ಒಳಪಟ್ಟಿರುತ್ತದೆ.

೨. ಗವರ್ನಿಂಗ್ ಕೌನ್ಸಿಲ್ ಇವರು ನಿಯಮ ೪(೪)ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿ

೩. ಶಾಲಾ ನಿವೇಶನ, ವಿಸ್ತೀರ್ಣ,ಕಟ್ಟಡ, ಪಾಠ, ಪೀಠೋಪಕರಣಗಳು, ಸಿಬ್ಬಂದಿ ವರ್ಗ ಆರ್ಥಿಕ ಅನ ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

ನಿರ್ದೇಶಕರು
ಪ್ರೌಢ ಶಿಕ್ಷಣ
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001.

೪. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.

೫. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

೬. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.

೭. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂದಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸಿದ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ ೧೯೮೩. ( ಕರ್ನಾಟಕ ಆಕ್ಟ ಸಂಖ್ಯೆ: ೧:೯೫) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.

೮. ಈ ಪ್ರೌಢ ಶಾಲಾ ನೋಂದಾವಣೆಯಂತೆ ಸರ್ಕಾರಿ ಅಧಿಸೂಚನೆ ಸಂಖ್ಯೆ ಇಡಿ:೧೭೫ ಪಿಎಂಸಿ ೯೫, ದಿನಾಂಕ: ೭-೯-೯೮ ಮತ್ತು ದಿನಾಂಕ: ೨೯-೧೨-೯೮ ರ ಪ್ರಕಾರ ಶಾಶ್ವತ ಅನುದಾನ ರಹಿತವಾಗಿರುತ್ತದೆ. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ.೧೦-೦೦ರ ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡುವುದು.

೯. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಖಾಸಗಿ ಅನುದಾನಿತ ಪ್ರಾಥಮಿ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ, ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮ ೧೯೯೯ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

೧೦. ಇಲಾಖೆ ಹಾಗೂ ಸರ್ಕಾರ ನಿಗಧಿ ಪಡಿಸಿದ ಪಠ್ಯ ಪುಸ್ತಕ, ಪರೀಕ್ಷಾ ಕ್ರಮಗಳನ್ನು ಮಾತ್ರ ತಪ್ಪದೆ ಅಳವಡಿಸತಕ್ಕದ್ದು.

೧೧. ಶಾಲೆ ಪ್ರಾರಂಭಿಸಿದ ಎರಡು ತಿಂಗಳ ಅವಧಿಯೊಳಗೆ ಪ್ರಥಮ ಮಾನ್ಯತೆಗೆ ಸಂಬಂಧಿಸಿದ ಉಪನಿರ್ದೇಶಕರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

೧೨. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮ್ಮಾನುಸಾರ ಪಾಲಿಸತಕ್ಕದ್ದು.

೧೩. ತರಭೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.

೧೪. ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇಧ ೮ರ ಅಡಿಯಲ್ಲಿ ಉಪಬಂಧ ೩೭-೩೯ ರಂತೆ ನೋಂದಾಯಿಸಿದ ಎಲ್ಲಾ ಶಾಲೆಗಳು ರೆಕಗ್ನೇಷನ್ ಹಾಗೂ ಪ್ರಾವಿಷನಲ್ ರೆಕಗ್ನೇಷನ್ ವ್ಯಾಪ್ತಿಗೆ ಬರುವುದು.

೧೫. ಪ್ರತಿ ವರ್ಷವು ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

೧೬. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ವಿಭಾಗೀಯ ಉಪ ನಿರ್ದೇಶಕರು ಹಾಗೂ ಆಡಳಿತ ಮಂಡಳಿಯ ಜಂಟಿ ಖಾತೆಯಲ್ಲಿ ಇರಿಸತಕ್ಕದ್ದು.

೧೭. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು, ಆಟದ ಮೈದಾನ ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು, ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.

೧೮. ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.

೧೯. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭದ ಎರಡು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಾನಾಗೇ ರದ್ದಾಗುವುದು.

ಸ್ಥಳ:ಬೆಂಗಳೂರು
ದಿನಾಂಕ: ೧೬-೦೨-೨೦೦೧

ನಿರ್ದೇಶಕರು (ಪ್ರೌಢ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ
ಹಾಗೂ ನೋಂದಣಿ ಅಧಿಕಾರಿ

ಗೆ:
ಕಾರ್ಯದರ್ಶಿಗಳು,
ಜೈಂಟ್ಸ್ ಶಿಕ್ಷಣ ಸಂಸ್ಥೆ,ಗೋಕುಲ ರೋಡ್,
ಹುಬ್ಬಳ್ಳಿ, ಧಾರವಾಡ ಜಿಲ್ಲೆ.

ಪ್ರತಿ:
೧) ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
೨) ಸಂಭಂಧಿಸಿದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ: ಜಿಲ್ಲಾ ಪಂಚಾಯತ್ ಧಾರವಾಡ ಜಿಲ್ಲೆ.
೪) ವಿಭಾಗೀಯ ಸಹನಿರ್ದೇಶಕರು ಬೆಳಗಾಂ ವಿಭಾಗ/ ಉಪನಿರ್ದೇಶಕರು, ಸಾಶಿಇ, ಧಾರವಾಡ ಜಿಲ್ಲೆ.
೫) ಕ್ಷೇತ್ರ ಶಿಕ್ಷಣಾಧಿಕಾರಿ, ಸಾ.ಶಿ.ಇ. ಹುಬ್ಬಳ್ಳಿ ನಗರ.
೬) ಕಛೇರಿ ಪ್ರತಿ.

ಸುಧಾ **\\Type6\d\Est 2\24090.doc**